ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ ಸಭೆ/ 31 /2020-21** **ದಿನಾಂಕ: 17.06.2020**

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 30.05.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 30.05.2020 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

17/06/2020
ಕುಲಸಚಿವರು

ಅಡಕ: ಮೇಲಿನಂತೆ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿವಿಪ-1/ 51 /2020-21 ದಿನಾಂಕ: 17.06.2020.

ದಿನಾಂಕ 30.05.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಆರ್.ಕೆ. ರಮೇಶಬಾಬು<br>ಜಂಟಿ ನಿರ್ದೇಶಕರು<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಪರವಾಗಿ | ಸದಸ್ಯರು |
| 3. | ಶ್ರೀ ಆರ್. ಮಂಜುನಾಥ<br>ಜಂಟಿ ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ನಿರ್ದೇಶಕರ ಪರವಾಗಿ | ಸದಸ್ಯರು |
| 4. | ಶ್ರೀಮತಿ ಸೌಮ್ಯರೆಡ್ಡಿ | ಸದಸ್ಯರು |
| 5. | ಶ್ರೀ. ಎಂ. ನಾರಾಯಣಸ್ವಾಮಿ | ಸದಸ್ಯರು |
| 6. | ಡಾ: ಎಸ್. ಹರೀಶ್ | ಸದಸ್ಯರು |
| 7. | ಡಾ: ಅಶಾ ಗಣೇಶ್ | ಸದಸ್ಯರು |
| 8. | ಡಾ: ಲತಾಕುಮಾರಿ | ಸದಸ್ಯರು |
| 9. | ಡಾ: ಬಿ.ಎ. ಅನುರಾಧಾ | ಸದಸ್ಯರು |
| 10. | ಡಾ. ಆರ್. ಪಾರ್ವತಿ | ಸದಸ್ಯರು |
| 11. | ಡಾ. ಇ.ಬಿ.ರಾಜೇಶ್ | ಸದಸ್ಯರು |

12. ಶ್ರೀ. ಡಿ.ಜಿ. ಶ್ರೀನಿವಾಸಮೂರ್ತಿ ಸದಸ್ಯರು

13. ಪ್ರೋ: ಕೆ. ರಮೇಶ್ ಸದಸ್ಯರು

14. ಡಾ. ಲಿಡಿಯಾ ಪಿ. ಸ್ಯಾಮುಯೆಲ್ ಸದಸ್ಯರು

15. ಡಾ: ಪಿ.ವಿ. ಪದ್ಮಜಾ ಸದಸ್ಯರು

16. ಪ್ರೊ. ಕೆ.ಎನ್. ಗೋದಾಮಣಿ ಸದಸ್ಯರು

17. ಡಾ: ಎಸ್.ಬಿ. ಅನುಪಮಾ ಸದಸ್ಯರು

18. ಡಾ: ಬಿ.ಎನ್. ಉಮೇಶ್ ಸದಸ್ಯರು

19. ಡಾ. ಎಂ. ಎಸ್. ಮಹಾದೇವ ನಾಯಕ ಸದಸ್ಯರು

20. ಡಾ: ವಿ.ಆರ್. ದೇವರಾಜು ಸದಸ್ಯರು

21. ಡಾ: ವಿ. ಗಾಯತ್ರಿ ಸದಸ್ಯರು

22. ಡಾ: ಎಸ್. ಹರಿಪ್ರಸಾದ್ ಸದಸ್ಯರು

23. ಡಾ: ಪಿ.ಆರ್. ಚೇತನ ಸದಸ್ಯರು

24. ಡಾ: ಎನ್. ನರಸಿಂಹಮೂರ್ತಿ ಸದಸ್ಯರು

25. ಡಾ: ಎಂ. ಮುನಿರಾಜು ಸದಸ್ಯರು

26. ಡಾ: ಎಂ. ಪಾಂಡುರಂಗಪ್ಪ ಸದಸ್ಯರು

27. ಪ್ರೊ. ಬಿ. ರಮೇಶ ಸದಸ್ಯರು
ಕುಲಸಚಿವರು (ಮೌಲ್ಯಮಾಪನ)

28. ಶ್ರೀ ಪಿ.ಎಲ್. ವೆಂಕಟೇಶಮೂರ್ತಿ ಸದಸ್ಯರು
ವಿತ್ತಾಧಿಕಾರಿಗಳು

29. ಶ್ರೀ ಪಿ. ಕುಮಾರ್ ಸದಸ್ಯ ಕಾರ್ಯದರ್ಶಿಗಳು
ಕುಲಸಚಿವರು

ಕುಲಪತಿಗಳು ಸರ್ಕಾರದಿಂದ ಕುಲಸಚಿವರಾಗಿ ನೇಮಕಗೊಂಡ ಶ್ರೀ ಪಿ. ಕುಮಾರ್ ಹಾಗೂ ವಿತ್ತಾಧಿಕಾರಿಗಳಾದ ಶ್ರೀ ಪಿ.ಎಲ್. ವೆಂಕಟೇಶಮೂರ್ತಿಯವರನ್ನು ಸಭೆಗೆ ಪರಿಚಯಿಸಿದರು.

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತ ಕೋರಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

| | |
|---|---|
| ವಿಷಯ ಸಂಖ್ಯೆ-1 | ಕೋವಿಡ್-19 ಕೋರೊನಾ ರೋಗಾಣು ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರ ರಜೆ ಘೋಷಿಸಿರುವ ಅವಧಿಯಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕುಲಪತಿಗಳಿಂದ ವರದಿ<br><br>ಮಾನ್ಯ ಕುಲಪತಿಗಳು ವಿವರಗಳನ್ನು ಸಭೆಗೆ ಒದಗಿಸಿದರು. ಯು.ಜಿ.ಸಿ. ಮತ್ತು ರಾಜ್ಯ ಸರ್ಕಾರದಿಂದ ಮಾಹಿತಿ ಬಂದನಂತರ ಶೈಕ್ಷಣಿಕ ವೇಳಾಪಟ್ಟಿ ಹೊರಡಿಸಲಾಗುವುದು ಎಂದು ತಿಳಿಸಿದರು.<br><br>ಮೊದಲ ಹಂತದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಡೆಸಿ ನಂತರ ಉಳಿದ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ನಡೆಸಲು ಯೋಜಿಸಲಾಗುತ್ತಿದೆ ಎಂದು ತಿಳಿಸಿದರು.<br><br>ಸನ್ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ, ವಿಧಾನಪರಿಷತ್ತಿನ ಸದಸ್ಯರು ಮಾತನಾಡಿ ಕೋವಿಡ್-19 ರಜಾ ಅವಧಿಯಲ್ಲಿ ವಿಶ್ವವಿದ್ಯಾಲಯ ಕೈಗೊಂಡ ಕ್ರಮಗಳಿಗೆ ಪ್ರಶಂಸೆ ವ್ಯಕ್ತಪಡಿಸಿ ದಾಖಲಿಸಲಾಯಿತು. |
| ನಿರ್ಣಯ: | **ಕೋವಿಡ್-19 ರಜಾ ಅವಧಿಯಲ್ಲಿ ವಿಶ್ವವಿದ್ಯಾಲಯ ಕೈಗೊಂಡ ಕ್ರಮಗಳನ್ನು ಸಭೆ ಗಮನಿಸಿ ಸರ್ವಾನುಮತದ ಅನುಮೋದನೆ ನೀಡಿತು.** |
| ವಿಷಯ ಸಂಖ್ಯೆ-2 | 2020-21ನೇ ಹಣಕಾಸು ವರ್ಷದ ಆಯವ್ಯಯ ಅಂದಾಜುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ನೀಡುವ ಕುರಿತು<br><br>2020-21ನೇ ಹಣಕಾಸು ವರ್ಷದ ಆಯವ್ಯಯ ಅಂದಾಜುಗಳ ವಿವರಗಳನ್ನು ಸಭೆಗೆ ವಿವರಿಸಿದರು ಹಾಗೂ ಆಯವ್ಯದಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿರುವುದನ್ನು ಸಭೆಗೆ ತಿಳಿಸಿದರು.<br><br>ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿಯವರು, ಮಾನ್ಯ ಉಪಮುಖ್ಯಮಂತ್ರಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಕೆಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ವರದಿಯಾಗಿರುವುದನ್ನು ಪ್ರಸ್ತಾಪಿಸಿ, ಈ ಕಾಮಗಾರಿಗೆ ಒದಗಿಸಬೇಕಾದ ಹಣಕಾಸಿನ ಲಭ್ಯತೆ ಕುರಿತು ವಿವರಗಳನ್ನು ಬಯಸಿದರು.<br><br>ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ನಿಧಿ ಹಾಗೂ ಮುಂದಿನ ಎರಡು ಆರ್ಥಿಕ ವರ್ಷಗಳಲ್ಲಿ ಉಳಿಕೆಯಾಗುವ ಮೊತ್ತದಿಂದ, ಸರ್ಕಾರ ಹಾಗೂ ಉದ್ಯಮಗಳ ಸಿ.ಎಸ್.ಆರ್ ನಿಧಿಯಿಂದ ಭರಿಸಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು. |

ಸದಸ್ಯರಾದ ಡಾ: ಎಸ್. ಹರಿಪ್ರಸಾದ, ಡಾ: ಎಂ. ಪಾಂಡುರಂಗಪ್ಪ, ಡಾ: ಎಂ. ಮುನಿರಾಜು, ಡಾ: ವಿ.ಆರ್. ದೇವರಾಜು ಮತ್ತು ಇತರ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿ, ಸ್ನಾತಕೋತ್ತರ ವಿಭಾಗಗಳಿಗೆ ಮೂಲ ಸೌಕರ್ಯ ಒದಗಿಸಲು ಹೆಚ್ಚಿನ ಅವಕಾಶ ಕಲ್ಪಿಸ ಬೇಕೆಂದು ತಿಳಿಸಿದರು. ಡಾ: ಆರ್. ಪಾರ್ವತಿಯವರು, ಸಂಯೋಜವನಾ ಶುಲ್ಕ ಮುಂತಾದ ಸ್ವೀಕೃತಿಗಳಲ್ಲಿ ಪ್ರತಿವರ್ಷ ಶೇ. 10 ರಷ್ಟು ಏರಿಕೆ ಮಾಡುತ್ತಿದ್ದು, ಈ ಸಲ ಅದು ಕಂಡುಬರುತ್ತಿಲ್ಲವೆಂದು ತಿಳಿಸಿದರು.

ಡಾ: ಎಂ. ಎಸ್. ಮಹಾದೇವ ನಾಯಕ ರವರು ಗ್ರಂಥಾಲಯದಲ್ಲಿ ಜರ್ನಲ್‌ಗಳನ್ನು FLIBNET ನಿಂದ ಒದಗಿಸಲು ಕ್ರಮ ಕೈಕೊಳ್ಳ ಬೇಕೆಂದು ತಿಳಿಸಿದರು. ಡಾ: ಇ.ಬಿ.ರಾಜೇಶ್ ರವರು ಚರ್ಚೆಯಲ್ಲಿ ಭಾಗವಹಿಸಿ, ಆಯವ್ಯಯ ಅಂದಾಜು ಪತ್ರವನ್ನು ಕ್ರಮಬದ್ಧವಾಗಿ ಸಿದ್ಧಪಡಿಸಿದ್ದು, ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಪ್ರಸ್ತುತ ಸಂದರ್ಭಗಳ Online ತರಗತಿಗಳಿಗಾಗಿ, Communication ವಿಭಾಗಕ್ಕೆ ಹೆಚ್ಚಿನ ಅನುದಾನ ನೀಡಿ ಅವರು Studio ಹೊಂದಲು ಅವಕಾಶ ಕಲ್ಪಿಸಿ Online ತರಬೇತಿಗೆ ಬಳಸಿಕೊಳ್ಳಬಹುದು ಎಂದು ತಿಳಿಸಿ, ಹೌಸ್ ಕೀಪಿಂಗ್ ಸಿಬ್ಬಂದಿಗಳ ಸಂಬಳ ಜಾಸ್ತಿಮಾಡಲು ವಿನಂತಿಸಿದರು. ಡಾ: ಎನ್. ನರಸಿಂಹಮೂರ್ತಿಯವರು ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಪಡಿಸಲು Competitive Exam Training Centre ಸ್ಥಾಪಿಸಲು ಕೋರಿದರು.

ಕುಲಪತಿಗಳು ಮತ್ತು ಕುಲಸಚಿವರು ಸದಸ್ಯರು ನೀಡಿದ ಸಲಹೆಗಳ ಕುರಿತು ವಿವರಣೆ ನೀಡಿ, ಎಲ್ಲಾ ವಿಭಾಗಗಳಿಗೆ ಅಗತ್ಯವಾದ ಬೇಡಿಕೆಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಗತ್ಯವಾದರೆ ಪೂರಕ ಆಯವ್ಯಯದ ಸಿದ್ಧಪಡಿಸುವ ಸಂದರ್ಭದಲ್ಲಿ ಒದಗಿಸಲಾದ ಮೊತ್ತವನ್ನು ಪರಿಷ್ಕರಿಸಿ ವಿಭಾಗದ ಅಗತ್ಯಗಳಿಗೆ ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಿದರು.

ನಿರ್ಣಯ: **2020-21ನೇ ಹಣಕಾಸು ವರ್ಷದ ಆಯವ್ಯಯ ಅಂದಾಜು ಪತ್ರಕ್ಕೆ ಸರ್ವಾನುಮತದ ಒಪ್ಪಿಗೆ ನೀಡಲು ಮತ್ತು ಸದಸ್ಯರು ನೀಡಿದ ಸಲಹೆ ಸೂಚನೆಗಳನ್ನು ಪೂರಕವಾಗಿ ಪರಿಗಣಿಸಲು ಸಭೆ ತೀರ್ಮಾನಿಸಿತು.**

| | |
|---|---|
| ವಿಷಯ ಸಂಖ್ಯೆ-3 | ವಿಶ್ವವಿದ್ಯಾಲಯದ ಬೋಧಕ –ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದ ಹಾಗೂ ಹೊಸ ಅಧ್ಯಯನ ವಿಭಾಗಗಳನ್ನು ಸ್ಥಾಪಿಸುವ ಕುರಿತು ಕರಡು ಪರಿನಿಯಮಗಳನ್ನು ಪರಿನಿಯಮಗಳನ್ನು ಪರಿಗಣಿಸುವ ಕುರಿತು<br><br>ಕುಲಸಚಿವರು ಪ್ರಸ್ತಾವನೆಯಲ್ಲಿ ನಮೂದಿಸಿರುವ ನಾಲ್ಕು ಪರಿನಿಯಮಗಳ ಕುರಿತು ಮಾಹಿತಿಯನ್ನು ಸಭೆಗೆ ಒದಗಿಸಿದರು.<br><br>ಸದಸ್ಯರಾದ ಡಾ: ಎಂ. ಪಾಂಡುರಂಗಪ್ಪ ರವರು ಈ ಪರಿನಿಯಮಾವಳಿಗೆ ಉಪ ಸಮಿತಿಯ ವರದಿಯ ಪ್ರಕಾರ ಇರುವ ಕುರಿತು ಮಾಹಿತಿ ಬಯಸಿದರು. ಸದಸ್ಯರಾದ ಡಾ: ವಿ.ಆರ್. ದೇವರಾಜು ಮಾತನಾಡಿ ತಾವು ಈ ಪರಿನಿಯಮಾವಳಿ ರಚನಾ ಸಮಿತಿಯ ಸದಸ್ಯರಾಗಿರುವುದರಿಂದ, ಸದರಿ ಸಮಿತಿ ಈ ಪರಿನಿಯಮಗಳನ್ನು ಅಂತಿಮವಾಗಿ ಪರಿಗಣಿಸಿಲ್ಲವಾದ ಕಾರಣ ತಾವು ಇವುಗಳನ್ನು ಒಪ್ಪಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು. ಡಾ: ಎನ್. ನರಸಿಂಹಮೂರ್ತಿ ಯವರು ಪರಿನಿಯಮಗಳನ್ನು ಒಪ್ಪಲು ಕೆಲವು ತಾಂತ್ರಿಕ ಸಮಸ್ಯಗಳಿವೆ ಎಂದು ತಿಳಿಸಿ, ಎಲ್ಲಾ ಪರಿನಿಯಮಗಳನ್ನು ಸೇರಿಸಿ ಕೋಢೀಕೃತ ಪರಿನಿಯಮವುಗಳನ್ನು ಸಿದ್ದಪಡಿಸ ಬೇಕೆಂದು ತಿಳಿಸಿ ಪರಿನಿಯಮಗಳಿಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು.<br><br>ಸದಸ್ಯರಾದ ಪ್ರೊ. ಕೆ.ಎಸ್. ಗೋಧಾಮಣಿ, ಡಾ: ಬಿ.ಎಸ್. ಉಮೇಶ, ಡಾ: ಎಸ್.ಬಿ. ಅನುಪಮಾ, ಡಾ: ಬಿ.ಎ. ಅನುರಾಧಾ, ಡಾ: ಇ.ಬಿ. ರಾಜೇಶ, ಡಾ: ಎಂ. ಎಸ್. ಮಹಾದೇವ ನಾಯಕ, ಪ್ರೊ: ಡಿ.ಜಿ. ಶ್ರೀನಿವಾಸಮೂರ್ತಿ, ಶ್ರೀ: ರಮೇಶ, ಡಾ: ಲತಾಕುಮಾರಿ, ಶ್ರೀಮತಿ ಸೌಮ್ಯ ರೆಡ್ಡಿ, ಶ್ರೀ ಎಂ. ನಾರಾಯಣಸ್ವಾಮಿ ಹಾಗೂ ಇನ್ನಿತರರು ಚರ್ಚೆಯಲ್ಲಿ ಭಾಗವಹಿಸಿ ಪರಿನಿಯಮಗಳನ್ನು ಸಮರ್ಥಿಸಿ, ಒಪ್ಪಿಗೆ ನೀಡಬೇಕೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು.<br><br>ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಹಾಗೂ ಶ್ರೀಮತಿ ಸೌಮ್ಯ ರೆಡ್ಡಿ ಯವರು ಸರ್ಕಾರ ನೀಡಿರುವ ಅವಕಾಶಗಳನ್ನು ಉಪಯೋಗಿಸಿ ಇರುವ ಕೋರ್ಸುಗಳನ್ನು ಬಲಗೊಳಿಸಿ, ಹೊಸ ಕೋರ್ಸುಗಳ ಪ್ರಾರಂಭಕ್ಕೆ ಸಹಕರಿಸಬೇಕು ಎಂದು ತಿಳಿಸಿದರು.<br><br>ಡಾ: ಎಸ್. ಹರಿಪ್ರಸಾದ ಮಾತನಾಡಿ ರಸಾಯನಶಾಸ್ತ್ರ ವಿಭಾಗ ಮೂರು ಅಂತರ ವಿಭಾಗಗಳನ್ನು ಹೊಂದಿದ್ದು, ನಿಯಮಗಳ ಪ್ರಕಾರ 21 ಹುದ್ದೆಗಳು ಅಗತ್ಯವಾಗಿವೆ, ಆದರೆ ಪ್ರಸ್ತುತ 5 ಜನ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿ, ಉಳಿದ ಹುದ್ದೆಗಳ ಮಂಜೂರಾತಿಗಾಗಿ ಕ್ರಮ ವಹಿಸ ಬೇಕೆಂದು ತಿಳಿಸಿದರು. |

| | |
|---|---|
| | ಕುಲಪತಿಗಳು ಅಭಿಪ್ರಾಯ ವ್ಯಕ್ತಪಡಿಸಿ, ಬಹುದಿನಗಳ ಪ್ರಯತ್ನದ ನಂತರ, ಹೊಸ ವಿಭಾಗ ಹಾಗೂ ಹುದ್ದೆಗಳು ಸಕಾರದಿಂದ ಮಂಜೂರಾಗಿದ್ದು, ಸದರಿ ವಿಭಾಗಗಳ ಸ್ಥಾಪನೆಗೆ ಹಾಗೂ ಮಂಜೂರು ಮಾಡಿದ ಹುದ್ದೆಗಳ ಸೃಜನೆಯ ಪರಿನಿಯಮಗಳನ್ನು ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು. ಬೋಧಕರ ಹುದ್ದೆಗಳಿಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ಯು.ಜಿ.ಸಿ ಹಾಗೂ ಸರ್ಕಾರದ ನಿಯಮಗಳ ಪ್ರಕಾರ ಸಿದ್ದಪಡಿಸಲಾಗಿದೆ. ಬೋಧಕೇತರ ಸಿಬ್ಬಂದಿಗಳ ಸಿ & ಆರ್ ನಿಯಮಗಳನ್ನು ಸರ್ಕಾರದ ನಿಯಮಾವಳಿಗಳನ್ನು ಪರಿಗಣಿಸಿ ಸದ್ದಪಡಿಸಲಾಗಿದೆ ಎಂದು ತಿಳಿಸಿದರು. ರಸಾಯನಶಾಸ್ತ್ರ ವಿಭಾಗಕ್ಕೆ ಹೆಚ್ಚಿನ ಹುದ್ದಗಳಿಗೆ ಸರ್ಕಾರದಿಂದ ಮಂಜೂರಾತಿ ಪಡೆಯಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. |
| ನಿರ್ಣಯ: | **ಸುಧೀರ್ಘ ಚರ್ಚೆಯ ನಂತರ, ಪ್ರಸ್ತಾವನೆಯಲ್ಲಿ ನಮೂದಿಸಿರುವ ಕೆಳಕಂಡ ನಾಲ್ಕು ಪರಿನಿಯಮಗಳಿಗೆ ವಿದ್ಯಾವಿಷಯಕ ಪರಿಷತ್ತಿನ ಸಭೆ ಬಹುಮತದ ಒಪ್ಪಿಗೆ ನೀಡಿತು.**<br>1. Statute Relating to Appointment and Promotion of Teachers and other Academic Staff and for implementation of revised UGC Pay Scales in Bengaluru Central University – 2020.<br>2. Statute Relating to the manner of conducting interview for appointment and promotion of Teachers and other Academic Staff in the Bengaluru Central University, Bengaluru, 2020.<br>3. Statute Governing Establishment of new Post Graduate Departments of Studies, Institution of Teaching posts for the new and existing Post Graduate Departments of Studies in Bengaluru Central University, 2020.<br>4. Statute Governing Cadre, Recruitment and Promotion of Non-Teaching, Technical and Ministerial Staff in the Bengaluru Central University, 2020. |
| ವಿಷಯ ಸಂಖ್ಯೆ-4 | ಎಂ.ಎಸ್ಸಿ ಪ್ರಾಣಿ ವಿಜ್ಞಾನ ಹಾಗೂ ಸಸ್ಯ ವಿಜ್ಞಾನ ವ್ಯಾಸಂಗದ ಪ್ರಥಮ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು |
| ನಿರ್ಣಯ: | **2019-20 ಶೈಕ್ಷಣಿಕ ಸಾಲಿನಿಂದ ಎಂ.ಎಸ್ಸಿ ಪ್ರಾಣಿ ವಿಜ್ಞಾನ ಹಾಗೂ ಸಸ್ಯ ವಿಜ್ಞಾನ ವ್ಯಾಸಂಗದ ಪ್ರಥಮ ಸೆಮಿಸ್ಟರ್ ಪಠ್ಯಕ್ರಮವನ್ನು ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.** |

| | |
|---|---|
| ವಿಷಯ ಸಂಖ್ಯೆ-5 | ಎಂ.ಎ ಆಂಗ್ಲ ವ್ಯಾಸಂಗದ 4 ನೇ ಸೆಮಿಸ್ಟರ್ ಪಠ್ಯಕ್ರಮವನ್ನು 2019-20 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಿರುವ ಕ್ರಮದ ಘಟನೋತ್ತರ ಅನುಮೋದನೆ ಕುರಿತು |
| ನಿರ್ಣಯ: | **2019-20 ಶೈಕ್ಷಣಿಕ ಸಾಲಿನಿಂದ ಎಂ.ಎ ಆಂಗ್ಲ ವ್ಯಾಸಂಗದ 4 ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಜಾರಿಗೊಳಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ-6 | ಎಂ.ಎಸ್ಸಿ ರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು 2020-21 ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲು ಕುರಿತು |
| ನಿರ್ಣಯ: | **2020-21 ಶೈಕ್ಷಣಿಕ ಸಾಲಿನಿಂದ ಎಂ.ಎಸ್ಸಿ ರಸಾಯನಶಾಸ್ತ್ರ ವ್ಯಾಸಂಗದ ಪಠ್ಯಕ್ರಮವನ್ನು ಜಾರಿಗೊಳಿಸಲು ಅನುಮೋದನೆ ನೀಡಲಾಯಿತು** |
| ವಿಷಯ ಸಂಖ್ಯೆ-7 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ "Centre for Advanced Studies, Professional Education & Research" (CASPER) ಸ್ಥಾಪಿಸಲು ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಮಾರ್ಗಸೂಚಿಗಳ ಅಡಿಯಲ್ಲಿ ರಚಿಸಲಾದ ಕರಡು ಪರಿನಿಯಮಾವಳಿಗಳ (Statutes) ಅನುಮೋದನೆ ಕುರಿತು<br><br>ಸದಸ್ಯರಾದ ಡಾ:ವಿ.ಆರ್. ದೇವರಾಜು ರವರು ಚರ್ಚೆಯಲ್ಲಿ ಭಾಗವಹಿಸಿ ಪರಿನಿಯಮದ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಈ ಕೋರ್ಸುಗಳು ಯಾವ ನಿಕಾಯದ ಅಡಿಯಲ್ಲಿ ಬರುತ್ತವೆ ಹಾಗೂ ಸಂಸ್ಥೆಯ ಆಡಳಿತ ನಿರ್ವಹಣೆ ಕುರಿತು ಮಾಹಿತಿ ಬಯಸಿದರು. ಇದಲ್ಲದೆ MoU ನಲ್ಲಿ ಒಳಗೊಂಡಿರುವ ಶುಲ್ಕ ಹಂಚಿಕೆ ಕುರಿತು ತಮ್ಮ ಅಭಿಪ್ರಾಯ ತಿಳಿಸಿ, CASPER ಸಂಸ್ಥೆ ವಿಶ್ವವಿದ್ಯಾಲಯ ನೇರ ಆಡಳಿತ ನಿರ್ವಹಣೆಯಲ್ಲಿರುವುದು ಉತ್ತಮವೆಂದು ತಿಳಿಸಿದರು. ಸದಸ್ಯರಾದ ಡಾ: ಎನ್. ನರಸಿಂಹಮೂರ್ತಿಯವರು ಸಹ ಶುಲ್ಕದ ಹಂಚಿಕೆ ಕುರಿತು ತಮ್ಮ ಸಹಮತವಿಲ್ಲವೆಂದು ತಿಳಿಸಿದರು.<br>ಕುಲಪತಿಗಳು ವಿವರಣೆ ನೀಡಿ CASPER ಯು.ಜಿ.ಸಿ University Industry Linkage ಕಾರ್ಯಕ್ರಮದ ಅಡಿಯಲ್ಲಿ, ವಿಶ್ವವಿದ್ಯಾಲಯದ ಆದಳಿತದ ನಿಯಂತ್ರಣ ಹೊಂದಿರುತ್ತದೆ ಎಂದು ತಿಳಿಸಿದರು. ಉದ್ಯೋಗ ಆಧಾರಿತ ಹೊಸ ಹೊಸ ಕೋರ್ಸುಗಳನ್ನು ಇದರಡಿಯಲ್ಲಿ ಪ್ರಾರಂಭಿಸಿ, ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಲು ಹಾಗೂ ಸಂಶೋಧನಾ Proeject ಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಿದರು. ವಿಶ್ವವಿದ್ಯಾಲಯ ಪ್ರಾರಂಭಿಸಲು ಉದ್ದೇಶಿಸಿರುವ ಟೆಕ್ನಾಲಜಿ ಸ್ನಾತಕೋತ್ತರ ವಿಭಾಗದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದರು. |

| | |
|---|---|
| | ಸದಸ್ಯರಾದ ಡಾ:ಎಂ. ಪಾಂಡುರಂಗಪ್ಪನವರು, MoU ವನ್ನು ಪುನ: ಪರಿಶೀಲಿಸಬೇಕೆಂದು ತಿಳಿಸಿದರು. ಡಾ: ಮಂಜುನಾಥ ರವರು ಮಾತನಾಡಿ ಈ ಸಂಸ್ಥೆ ವಿಶ್ವವಿದ್ಯಾಲಯ ಆದಳಿತದ ಅಡಿಯಲ್ಲಿ ಕಾರ್ಯ ನಿರ್ವಹಿಸುವುದು ಸೂಕ್ತವೆಂದು ತಿಳಿಸಿದರು.<br><br>ಡಾ: ಲಿಡಿಯಾ ಪಿ. ಸ್ಯಾಮುಯೆಲ್, ಡಾ.ಬಿ.ಎನ್. ಉಮೇಶ, ಡಾ: ಬಿ.ಎ. ಅನುರಾಧಾ ಮಾತನಾಡಿ ಹೊಸ ಹೊಸ ಯೋಚನೆ ಹಾಗು ಅವಿಷ್ಕಾರಗಳಿಗೆ ಬೆಂಬಲ ನೀಡಬೇಕು MoU ಬದಲಾವಣೆ ಮಾಡಬೇಕಾದಲ್ಲಿ ಅದನ್ನು ಪುನ: ಪರಿಶೀಲಿಸಿ ಅಗತ್ಯ ತಿದ್ದುಪಡಿ ಮಾಡ ಬಹುದೆಂದು ತಿಳಿಸಿ MoU ಹೊರತುಪಡಿಸಿ ಪರಿನಿಯಮಗಳಿಗೆ ಒಪ್ಪಿಗೆ ಸೂಚಿಸಲು ಕೋರಿದರು. |
| ನಿರ್ಣಯ: | **ಸುದಿರ್ಘ ಚರ್ಚೆಯ ನಂತರ MoU ಹೊರತು ಪಡಿಸಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ "Centre for Advanced Studies, Professional Education & Research" (CASPER) ಸ್ಥಾಪಿಸುವ ಕರಡು ಪರಿನಿಯಮಾವಳಿಗಳಿಗೆ (Statutes) ಅನುಮೋದನೆ ನೀಡಲು ಹಾಗೂ ಈ ಸಂಸ್ಥೆ ವಿಶ್ವವಿದ್ಯಾಲಯದ ಆಡಳಿತದ ನಿಯಂತ್ರಣದಲ್ಲಿರಬೇಕೆಂಬ ಷರತ್ತಿನೊಂದಿಗೆ ವಿದ್ಯಾವಿಷಯಕ ಪರಿಷತ್ತಿನ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.** |
| ವಿಷಯ ಸಂಖ್ಯೆ-8 | ರಾಜ್ಯದಲ್ಲಿನ ಉನ್ನತ ಶಿಕ್ಷಣದ ಅನುಪಾತವನ್ನು ಹೆಚ್ಚಿಸುವ ಕುರಿತು ತಜ್ಞರ ಸಮಿತಿಯು ನೀಡಿರುವ ವರದಿಯ ಬಗ್ಗೆ.<br><br>ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪ್ರವೇಶಕ್ಕೆ ಪ್ರಸ್ತುತ ನಿಗದಿ ಪಡಿಸಿದ ಸಂಖ್ಯೆಯಬದಲಾಗಿ, ಶೇಕಡಾ 10ರಷ್ಟು ಹೆಚ್ಚಿಗೆ ಮಾಡಲು ಮತ್ತು ಇದನ್ನು ನಿಗದಿಪಡಿಸಿದ ಪ್ರವೇಶ ಸಂಖ್ಯೆಯ ಮಿತಿಗಿಂತ ಅತಿರಿಕ್ತವೆಂದು ಪರಿಗಣಿಸ ಬಹುದೆಂದು ತಿಳಿಸಿ, 317 (ಜೆ) ಅಡಿಯಲ್ಲಿ ನೀಡುವ ಪ್ರವೇಶಗಳನ್ನು ಸಂಖ್ಯೆಯ ಮಿತಿಯಲ್ಲಿ ಇರುವುದರಿಂದ ಮಹಾವಿದ್ಯಾಲಯಗಳಿಗೆ ತೊಂದರೆಯಾಗಿದೆ ಎಂದು ತಿಳಿಸಿ ಇದನ್ನು ಸಹ ನಿಗದಿತ ಪ್ರವೇಶ ಸಂಖ್ಯೆಗೆ ಅತಿರಿಕ್ತವೆಂದು ಪರಿಗಣಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.<br><br>ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು 371 (ಜೆ) ಪ್ರವೇಶ ಕುರಿತು ವಿವರಣೆ ನೀಡಿ ಇದು ಒಟ್ಟಾರೆ ಪ್ರವೇಶ ಸಂಖ್ಯೆಯ ಮಿತಿಯೊಳಗೆ ಬರುತ್ತಿದೆ ಎಂದು ತಿಳಿಸಿದರು. ಕುಲಸಚಿವರು ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಮಾಹಿತಿ ಪಡೆಯಲಾಗುವುದು ಎಂದು ತಿಳಿಸಿದರು. |

| | |
|---|---|
| ನಿರ್ಣಯ: | ಬೇರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಪ್ರವೇಶ ಸಂಖ್ಯೆಯನ್ನು ಈಗಿರುವ ಪ್ರಮಾಣಕ್ಕೆ ಬದಲಾಗಿ, ಪ್ರವೇಶ ಸಂಖ್ಯೆಯ ಶೇಕಡ 10% ಕ್ಕೆ ಹೆಚ್ಚಿಸಿ ಈ ಪ್ರವೇಶಗಳು ನಿಗದಿತ ಪ್ರವೇಶ ಸಂಖ್ಯೆಗೆ ಹೊರತು ಪಡಿಸಿ, ಅನುಮೋದನೆ ನೀಡಲು ಹಾಗೂ 371(ಜೆ) ಅಡಿಯಲ್ಲಿ ಮೀಸಲಾತಿಯ ಪ್ರವೇಶಗಳಳನ್ನು ನಿಗದಿತ ಪ್ರವೇಶ ಸಂಖ್ಯೆಗೆ ಅತಿರಿಕ್ತವೆಂದು ಪರಿಗಣಿಸಲು ಸರ್ಕಾರಕ್ಕೆ ಕೋರಿಕೆ ಸಲ್ಲಿಸಬೇಕೆಂದು ವಿದ್ಯಾವಿಷಯಕ ಪರಿಷತ್ತಿನ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು. |
| ವಿಷಯ ಸಂಖ್ಯೆ-9 | ಹೊರನಾಡು / ಗಡಿನಾಡು ಕನ್ನಡಿಗರು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಮಾಡಿ ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕ ರಾಜ್ಯದ ಒಳಗೆ ವಿದ್ಯಾಭ್ಯಾಸ ಮುಂದುವರಿಸಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಲ್ಲಿ ಶೇ.5%ರಷ್ಟು ಮೀಸಲಿಸಿರುವ ಕುರಿತು. |
| ನಿರ್ಣಯ: | ಹೊರನಾಡು ಮತ್ತು ಗಡಿನಾಡು ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಹಾಗೂ ಸಂಯೋಜಿತ ಕಾಲೇಜುಗಳ ಸ್ನಾತಕ ಹಾಗು ಸ್ನಾತಕೋತ್ತರ ವಿಭಾಗಗಳ ಕೋರ್ಸುಗಳಲ್ಲಿ ಶೇಕಡ 5% ರಷ್ಟು ಮೀಸಲಾತಿಯನ್ನು ನಿಗದಿತ ಪ್ರವೇಶ ಸಂಖ್ಯೆಗೆ ಅತಿರಿಕ್ತವೆಂದು ಪರಿಗಣಿಸಿ ನಿಗದಿಪಡಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು. |
| ವಿಷಯ ಸಂಖ್ಯೆ-10 | Online Guided Internship- To consider draft Memorandum of Understanding with Clock Work Services<br>ಈ ಯೋಜನೆಯನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯ ನಿರ್ವಹಿಸುವ ಹಾಗೂ ಇದಕ್ಕಾಗಿ ವಿಶ್ವವಿದ್ಯಾಲಯ ಯಾವುದೇ ಹಣಕಾಸು ಬಾಧ್ಯತೆ ಇರುವುದಿಲ್ಲವೆಂದು ಕುಲಪತಿಗಳು ಸಭೆಗೆ ತಿಳಿಸಿದ ಹಿನ್ನೆಲೆಯಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಬಹುದೆಂದು ಸದಸ್ಯರು ಅಭಿಪ್ರಾಯ ಪಟ್ಟರು. |
| ನಿರ್ಣಯ: | **Online Guided Internship** ಕಾರ್ಯಕ್ರಮ ಹಾಗೂ ಕರಡು MoU ಅನುಮೋದಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆ ತೀರ್ಮಾನಿಸಿತು. |
| | ಅಧ್ಯಕ್ಷರ ಅನುಮೋದನೆ ಮೇರೆಗೆ ಇತರ ವಿಷಯಗಳು |
| ಸಾಮಾನ್ಯ ಚರ್ಚೆ- 1 | ಸದಸ್ಯರಾದ ಡಾ. ಆರ್. ಪಾರ್ವತಿಯವರು, ಮಹಾವಿದ್ಯಾಲಯಗಳ ಸಂಯೋಜನಾ ಅಧಿಸೂಚನೆ ಕುರಿತು ವಿಳಂಬವನ್ನು ಪ್ರಸ್ತಾಪಿಸಿ, ವಿಶ್ವವಿದ್ಯಾಲಯ ಅರ್ಜಿಗಳನ್ನು ಅಹ್ವಾನಿಸಿ, ಶುಲ್ಕವನ್ನು ಪಡೆಯುವ ಕ್ರಮ ಜರುಗಿಸ ಬೇಕೆಂದು ತಿಳಿಸಿದರು.<br>ಈ ಕುರಿತು ಸರ್ಕಾರದೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ಕೈಕೊಳ್ಳಲಾಗುವುದೆಂದು ಕುಲಪತಿಗಳು ಹಾಗೂ ಕುಲಸಚಿವರು ತಿಳಿಸಿದರು. |

| | |
|---|---|
| ಸಾಮಾನ್ಯ ಚರ್ಚೆ– 2 | ಡಾ: ಹರಿಪ್ರಸಾದ ರವರು ರಸಾಯನಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ನೀಡ ಬೇಕಾದ ಚಿನ್ನದ ಪದಕಗಳು ದತ್ತಿ ಬೆಂಗಳುರು ವಿಶ್ವವಿದ್ಯಾಲಯದಲ್ಲಿ ಇರುವುದರಿಂದ ಅವುಗಳನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಪಡೆದರೆ ಈ ವಿದ್ಯಾರ್ಥಿಗಳಿಗೆ ಅನುಕುಲವಾಗುತ್ತದೆ ಎಂದು ತಿಳಿಸಿದರು.<br>ಈ ಕುರಿತು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆಯಲಾಗುವುದೆಂದು ಕುಲಪತಿಗಳು ತಿಳಿಸಿದರು |
| ಸಾಮಾನ್ಯ ಚರ್ಚೆ– 3 | ಶೈಕ್ಷಣಿಕ ವೇಳಾ ಪಟ್ಟಿ ಪ್ರಕಟಿಸಲು ಕುರಿತಂತೆ ಕೋರಲಾದ ಮಾಹಿತಿಗೆ, ಯು.ಜಿ.ಸಿ ಮತ್ತು ಸರ್ಕಾರದ ನಿರ್ದೇಶನಗಳು ಬಂದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಕುಲಪತಿಗಳು ತಿಳಿಸಿದರು. |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
**ಕುಲಸಚಿವರು**

ಸಹಿ/–
**ಕುಲಪತಿಗಳು**

ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ